# ಪರ್ವತಾರೋಹಿಗಳ ಸ್ವರ್ಗ ಮೌಂಟ್ ರೇನಿಯರ್



ಹಿಮಕಂದಕಗಳಿಗಾಗಿಯೇ ಪ್ರಸಿದ್ಧ ಪರ್ವತವೊಂದರ ಟ್ರೆಕ್ಕಿಂಗ್‌ನಲ್ಲಿ ಐವತ್ತಕ್ಕೂ ಹೆಚ್ಚು ಕಂದಕಗಳನ್ನು ಬ್ಯಾಕ್ ಪ್ಯಾಕ್ ಹೊತ್ತು ಯಾವುದೇ ಹಿಡಿಕೆಯ ಸಹಾಯವಿಲ್ಲದೆ ದಾಟಿದ ಅನುಭವ ಅವಿಸ್ಮರಣೀಯ.

■ ಚಿತ್ರ– ಲೇಖನ: **ಸೌಮ್ಯಶ್ರೀ ಮಹದೇವಯ್ಯ**

ಉತ್ತರ ಅಮೆರಿಕದ ವಾಷಿಂಗ್ಟನ್ ಸ್ಟೇಟ್‌ನ ಸಿಯಾಟಲ್ ನಗರದ ಸುಸಜ್ಜಿತ ಟ್ರೆಕ್ಕಿಂಗ್ ಸಂಸ್ಥೆಯಲ್ಲಿ ಹೆಸರು ನೋಂದಾಯಿಸುವುದರೊಂದಿಗೆ ನಿಸರ್ಗದೊಂದಗಿನ ನನ್ನ ಅಭಿಯಾನಕ್ಕೆ ಚಾಲನೆ ಸಿಕ್ಕಿತು. ಚಾರಣ ಈಗ ನನ್ನ ಜೀವನದ ಅವಿಭಾಜ್ಯ ಅಂಗ.

ಕಳೆದ ನಾಲ್ಕು ವರ್ಷಗಳಲ್ಲಿ ಚಾರಣಗೈದ ಸ್ಥಳಗಳು ಹಲವು. ಅತ್ಯಂತ ದುರ್ಗಮ ಟ್ರೆಕ್ಕಿಂಗ್‌ಗಳಿಗೆ ಸಂಸ್ಥೆಯ ಗೈಡ್‌ಗಳೂ ಸಹಚರರಾಗಿ ಮುನ್ನಡೆಸುವುದರಿಂದ ಟ್ರೆಕ್ಕಿಂಗ್ ಅಸಾಧ್ಯದ ಕೆಲಸವೇನಲ್ಲ. ಪುಟ್ಟ ಟೆಂಟ್‌ಗಳಲ್ಲಿ ಹಿಮರಾಶಿಯ ನಡುವೆ, ಸ್ಲೀಪಿಂಗ್ ಬ್ಯಾಗ್‌ನಲ್ಲಿ ನುಸುಳಿ, ಕರಡಿ– ಜಿಂಕೆಗಳ ಸಹಚರ್ಯದೊಂದಿಗೆ ನಿದ್ರೆಗೆ ಜಾರಿದರೆ ಅದೊಂದು ಬೇರೆಯದ್ದೇ ಆದ ಲೋಕ. ಪರ್ವತ ಹಿಮಶ್ರೇಣಿಗಳಲ್ಲಿ ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ವರ್ಣ ವೈಭವ ಬಣ್ಣಿಸಲಸದಳ.

ಇಂಥ ಚಾರಣಗಳಲ್ಲಿ ಕಿರೀಟಪ್ರಾಯವಾದದ್ದು ಹಿಮಚ್ಛಾದಿತ ಮೌಂಟ್ ರೇನಿಯರ್ ಚಾರಣ. ಐದು ಲಕ್ಷ ವರ್ಷಗಳಷ್ಟು ಪುರಾತನವಾದ ಮತ್ತು ಮೌಂಟ್ ರೇನಿಯರ್ ಉತ್ತರ ಅಮೆರಿಕದ ಮೂರನೆಯ ಅತಿ ಎತ್ತರದ (14,411 ಅಡಿ) ಪರ್ವತವಿದು. ಈ ಹಿಮಾವೃತ ಪರ್ವತ 1894 ರಲ್ಲಿ ತನ್ನೊಡಲ ಅಗ್ನಿಯನ್ನು ಚಿಮ್ಮಿಸಿದಾಗ 87 ಕಿ. ಮೀ ದೂರದ ಸಿಯಾಟಲ್‌ನ ಬಹು ಭಾಗ ಅಗ್ನಿಗಾಹುತಿಯಾಗಿತ್ತು.

ಆ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸಿ ಟ್ರೆಕ್ಕಿಂಗ್ ಮಾಡಲು ನಿರ್ಧರಿಸಿ ಸುಮಾರು ಆರು